

ಮಾಡಿದ್ದ ಹಿಲ್ಲೆಮನ್ ಅವರು ಇನ್‌ಫ್ಲೂಯೆಂಝಾ (ಫ್ಲೂ – ನೆಗಡಿ, ಜ್ವರ ಹಾಗೂ ಮೈಕೈನೋವು) ವೈರಸ್‌ಗಳ ಗುಣಲಕ್ಷಣಗಳು ಕಾಲಾಂತರದಲ್ಲಿ ಬದಲಾಗುವುದನ್ನು ಗುರುತಿಸಿದ್ದರು. ಅದನ್ನು ತಡೆಗಟ್ಟಬಲ್ಲ ಸೂಕ್ತ 'ವ್ಯಾಕ್ಸೀನ್' ಅನ್ನೂ ಶೋಧಿಸಿ – ಬಹುದೊಡ್ಡ ಮಟ್ಟದಲ್ಲಿ ಫ್ಲೂ ಪ್ರಸರಣೆಯನ್ನು ನಿಲ್ಲಿಸಿದರು. ತಮ್ಮ ಮಗಳಿಗೇ ಮಂಪ್ಸ್ (ಮಂಗನ ಬಾವು) ತಗುಲಿದಾಗ, ಅವಳ ದೇಹದಿಂದ ತೆಗೆದ ವೈರಸ್ ಅನ್ನು ಸಂಸ್ಕರಿಸಿ, ರೋಗನಿರೋಧಕ ವ್ಯಾಕ್ಸೀನ್ ಅನ್ನು ಸಿದ್ಧಪಡಿಸಿದರು. ಹಾಗೆಯೇ ಮಕ್ಕಳನ್ನು ಕಾಡುವ ಮಂಪ್ಸ್ (ಮಂಗನ ಬಾವು), ಮೀಸಲ್ಸ್ (ದಡಾರ) ಹಾಗೂ ರುಬೆಲ್ಲ (ಜರ್ಮನ್ ದಡಾರ) ರೋಗಗಳನ್ನು ತಡೆಗಟ್ಟಬಲ್ಲ ಒಂದೇ ಲಸಿಕೆಯನ್ನು (ಎಂ.ಎಂ.ಆರ್.) ಸಹಾ ಅವರು ಆವಿಷ್ಕರಿಸಿದರು. ಸುದೀರ್ಘ ಕಾಲ ಯಕೃತ್ತಿನಲ್ಲಿ (ಲಿವರ್) ಉರಿಯೂತಕ್ಕೆ ಕಾರಣವಾಗಿ, ಅರಿಸಿನ ಕಾಮಾಲೆ (ಜಾಂಡೀಸ್) ರೋಗ ತರಬಲ್ಲ 'ಹೆಪಟೈಟಿಸ್–ಬಿ' ಸೋಂಕಿಗೂ ಲಸಿಕೆಯನ್ನು ಹಿಲ್ಲೆಮನ್ ಕಂಡುಹಿಡಿದರು.

## ಹೊಸ ವ್ಯಾಕ್ಸೀನ್‌ಗಳ ಪರ್ವಕಾಲ

ಇಪ್ಪತ್ತನೆಯ ಶತಮಾನದ ನಡುವಿನ ಅವಧಿಯನ್ನು ವ್ಯಾಕ್ಸೀನ್‌ಗಳ ಸಂಶೋಧನೆ ಮತ್ತು ಅಭಿವೃದ್ಧಿಯ ಪರ್ವಕಾಲವೆನ್ನಬಹುದು. ಪ್ರಯೋಗಶಾಲೆಗಳಲ್ಲಿಯೇ ವೈರಸ್‌ಗಳನ್ನು ಪೋಷಿಸಿ ಬೆಳೆಸುವ ಅನುಕೂಲಗಳು ಲಭ್ಯವಾದವು. ಅವುಗಳ ಬೆಳವಣಿಗೆಯನ್ನು ಹತೋಟಿಯಲ್ಲಿಡಬಲ್ಲ ಹೊಸ ಶೋಧಗಳೂ ಆವಿಷ್ಕಾರಗಳೂ ತ್ವರಿತ ಗತಿಯಲ್ಲಿ ಮುನ್ನಡೆದವು. ಚಿಕ್ಕಮಕ್ಕಳನ್ನು ಕಾಡುವ ಮಂಗನ ಬಾವು (ಮಂಪ್ಸ್), ದಡಾರ (ಮೀಸಲ್ಸ್) ಹಾಗೂ ಜರ್ಮನ್ ದಡಾರ (ರುಬೆಲ್ಲ) ಪೋಲಿಯೊ, ನಾಯಿಕೆಮ್ಮು (ಪರ್ಟ್ಯುಸ್ಸಿಸ್), ಧನುರ್ವಾಯು (ಟೆಟನಸ್), ಕ್ಷಯ (ಟ್ಯುಬರ್‌ಕ್ಯುಲೋಸಿಸ್) ಹಾಗೂ ಗಂಟಲಮಾರಿಗಳ (ಡಿಫ್ತೀರಿಯ) ಜಾಡ್ಯಗಳು ಬಹುಮಟ್ಟಿಗೆ ನಿಯಂತ್ರಣಕ್ಕೆ ಬಂದವು. ಇವುಗಳಿಗೆಂದು ರೂಪಿಸಿದ ರೋಗನಿರೋಧಕ ಮದ್ದುಗಳಿಂದಾಗಿ ಶಿಶುಮರಣಗಳ ಸಂಖ್ಯೆಯು ತೀವ್ರಗತಿಯಲ್ಲಿ ಇಳಿಕೆಯಾಯಿತು. 'ವಿಶ್ವ ಸ್ವಾಸ್ಥ್ಯ ಸಂಸ್ಥೆ'ಯ ಪ್ರಕಾರ ಜಗತ್ತಿನ ಪ್ರತಿಶತ 86 ಶಿಶುಗಳಿಗೆ ಮಾರಕ ಜಾಡ್ಯಗಳ ವಿರುದ್ಧ ಇಂದು ಲಸಿಕೆಗಳು ಸಿಗುತ್ತಿವೆ. 1980ರಲ್ಲಿ ಕೇವಲ 20 ಪ್ರತಿಶತ ಮಕ್ಕಳಿಗೆ ಮಾತ್ರ ಜೀವರಕ್ಷಕ ಲಸಿಕೆಗಳು ಲಭ್ಯವಾಗುತ್ತಿದ್ದವು. ಹಾಗೆಯೇ, ಆಂಥ್ರಾಕ್ಸ್ (ನೆರಡಿ ರೋಗ), ಕಾಲರ, ಪ್ಲೇಗ್, ವಿಷಮಶೀತ ಜ್ವರ (ಟೈಫಾಯ್ಡ್), ಮುಂತಾದ ಮಾರಕ ರೋಗಗಳಿಗೂ ಲಸಿಕೆಗಳು ಅಭಿವೃದ್ಧಿಯಾದವು.

ಮುಂದಿನ ದಶಕಗಳಲ್ಲಿ ಮಾನವ ದೇಹದ ವಂಶವಾಹಿ ಅಥವಾ ಗುಣಾಣುಗಳ (ಜೀನ್) ಜೊತೆಗೆ ಬ್ಯಾಕ್ಟೀರಿಯಾ ಹಾಗೂ ವೈರಸ್‌ಗಳ ಜೀನ್‌ಗಳ ಕುರಿತೂ ಮಾಹಿತಿಗಳು ಲಭ್ಯವಾದವು. ಈ ರೋಗಕ್ರಿಮಿಗಳ ಗುಣಲಕ್ಷಣಗಳು, ಆ ಗುಣಲಕ್ಷಣಗಳಲ್ಲಾಗುವ ತ್ವರಿತ ಬದಲಾವಣೆಗಳು, ಅವು ರೋಗಲಕ್ಷಣಗಳ ಮೇಲುಂಟು ಮಾಡುವ ಪರಿಣಾಮಗಳು – ಇವೆಲ್ಲ ವಿಷಯಗಳ ಕುರಿತಂತೆ ಸಂಶೋಧನೆಗಳು ಜರುಗಿದವು. ಆ ಅಧ್ಯಯನಗಳ ಫಲಿತಾಂಶಗಳು ಹೊಸ ಬಗೆಯ 'ವ್ಯಾಕ್ಸೀನ್'ಗಳ ಆವಿಷ್ಕಾರಗಳಿಗೆ ನೆರವಾದವು.

'ಕೋವಿಡ್–19'ನಂಥ ಯಾವುದೇ ಹೊಸ ವೈರಸ್‌ನ ಗುಣಲಕ್ಷಣಗಳನ್ನು ಅರಿಯುವುದರೊಳಗೆ, ಅದು ಕೊಂಚ ಕೊಂಚವೇ ತನ್ನ ಕಾರ್ಯಾಚರಣೆಯನ್ನು ಬದಲಿಸಿಕೊಂಡಿರುತ್ತದೆ. ಕಾರಣ, ನಮ್ಮೆಲ್ಲರ ದೇಹದ ಜೀವಕೋಶಗಳು ಒಂದೇ ಬಗೆಯ ಅಚ್ಚುಯಂತ್ರಗಳಲ್ಲ. ಸಣ್ಣಪುಟ್ಟ ವ್ಯತ್ಯಯಗಳು ಈ ಬಗೆಯ ವೈರಸ್‌ನ ಪ್ರತಿರೂಪವನ್ನು ಸೂಕ್ಷ್ಮ ಅಳತೆಯಲ್ಲಿ ಬದಲಿಸಿರುತ್ತವೆ. ಹಾಗೆಯೇ ಅವು ಹೊಕ್ಕ ದೇಹದಲ್ಲಿನ ಅಂಗಾಂಗ ನ್ಯೂನ್ಯತೆಗಳು, ಸುರಕ್ಷಾ ವ್ಯವಸ್ಥೆಯ ಸಾಮರ್ಥ್ಯಗಳಿಗನುಗುಣವಾಗಿ, ವೈರಸ್ ಬೀರುವ ಪ್ರಮಾಣವೂ ಭಿನ್ನವಾಗಿರುತ್ತದೆ. ಇದರಿಂದಾಗಿ, ಇಂಥ ವಿನೂತನ ವೈರಸ್‌ನ ಹತೋಟಿಯು ಸುಲಭದ್ದಲ್ಲ. ಹಾಗೆಂದ ಮಾತ್ರಕ್ಕೆ ನಾವು ನಿರಾಶರಾಗಬೇಕಿಲ್ಲ. ಈ ಹಿಂದೆ ನಮ್ಮ ಮೇಲೆ ದಾಳಿ ಮಾಡಿದ ಕೊರೋನಾ ವೈರಸ್‌ನ ದಾಯಾದಿ ನೆಂಟರಾದ 'ಸಾರ್ಸ್' ಹಾಗೂ 'ಮೆರ್ಸ್' ವೈರಸ್‌ಗಳು ನಿಮಗೆ ಗೊತ್ತಿರಬಹುದು. ಅವು ಬದಲಿಸಿಕೊಂಡಷ್ಟು ಗುಣಲಕ್ಷಣಗಳನ್ನು ಈ ಕೊರೊನಾ ವೈರಸ್ ಬದಲಿಸಿಕೊಂಡಿಲ್ಲ ಎಂಬುದೇ ನೆಮ್ಮದಿಯ ವಿಚಾರ. ಹಾಗೆಯೇ 'ಸಾರ್ಸ್' ವೈರಸ್‌ನ 79 ಪ್ರತಿಶತ ಹಾಗೂ 'ಮೆರ್ಸ್' ವೈರಸ್‌ನ 50 ಪ್ರತಿಶತ ಜೀನ್‌ಗಳನ್ನು ಕೊರೊನಾ ವೈರಸ್ ಸಹಾ ಹಂಚಿಕೊಂಡಿದೆ. ಇವೆರಡೂ ಸೋಂಕುಗಳನ್ನು ಹತೋಟಿಗೆ ತರಲೆಂದು ಸೃಷ್ಟಿಸಿದ ಮದ್ದುಗಳ ತಯಾರಿಕಾ ಅನುಭವಗಳು, ಇಂದು ಆವಿಷ್ಕಾರವಾಗಿರುವ ಲಸಿಕೆಗಳ ನಿರ್ಮಾಣದಲ್ಲಿ ಮಹತ್ತರ ಕೊಡುಗೆಗಳನ್ನು ನೀಡಿವೆ.

ಆದರೆ ಸುರಕ್ಷಿತವಾದ ಲಸಿಕೆಯು ದೇಶದ ಎಲ್ಲ ಜನರಿಗೆ ತಲುಪುವ ತನಕ ಆಸ್ಪತ್ರೆಗೆ ದಾಖಲಾಗುವ ಸೋಂಕಿತರ ಸಂಖ್ಯೆಯನ್ನು ನಾವು ಸಾಕಷ್ಟು ಕಡಿಮೆಯಾಗಿಸಬೇಕು. ಅದು ದೈಹಿಕ ಅಂತರವನ್ನು ಕಾಪಾಡಿಕೊಳ್ಳುವುದರ ಮೂಲಕವಷ್ಟೇ ಸಾಧ್ಯ. ನಮ್ಮಂಥ ಜನನಿಬಿಡ ದೇಶದಲ್ಲಿ ಅದನ್ನು ಕಟ್ಟಳೆಗಳ ಮೂಲಕವೇ ಮಾಡಬೇಕು.

ಪ್ರತಿಕ್ರಿಯಿಸಿ: feedback@sudha.co.in